ಸಿಸಿ ನಂಃ 2028/2025
ಸಿ.ಡಬ್ಲೂ 2/ ಪಿ.ಡಬ್ಲೂ 2

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2028/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕಿರಣ ಗೊಬ್ಬರಗುಂಪಿ |
| ತಂದೆಯ ಹೆಸರು | ಃ | ಈರಣ್ಣ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸ ಸ್ಥಳ | ಃ | ಹುಬ್ಬಳ್ಳಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **27-03-2026**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಚಾಸಾ-3 ಗೊತ್ತಿಲ್ಲ. 07- 8 ತಿಂಗಳ ಹಿಂದೆ ಪೋಲಿಸರು ನನ್ನನ್ನು ಮಣಿಕಂಠ ನಗರದ ಐಯ್ಯಪ್ಪ ಸ್ವಾಮಿ ದೇವಸ್ಥನ ಬಳಿ ಕರೆಯಿಸಿ ಬೆಳಿಗ್ಗೆ 10.00 ರಿಂದ 10.30 ರವರೆಗೆ ಸ್ಥಳ ಪಂಚನಾಮೆ ಮಾಡಿದರು. ಸಾಕ್ಷಿಯು ನೋಟಿಸ್ಸಹಾಗೂ ನೋಟಿಸ್ಸಲ್ಲಿರುವ ಸಹಿ ಗುರುತಿಸಿದ ಮೇರೆಗೆ ನೋಟಿಸ್ಸನ್ನು ನಿಪಿ.2 ಮತ್ತು ಸಹಿಯನ್ನು ನಿಪಿ.2(ಎ), ಪಂಚನಾಮೆಯನ್ನು ಗುರುತಿಸಿದ ಮೇರೆಗೆ ನಿಪಿ.3 ಮತ್ತು ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಅದೇ ವೇಳೆಗೆ ತೆಗೆದ ಪೋಟೋ ಗುರುತಿಸಿದ ಮೇರೆಗೆ ನಿಪಿ.4 ಎಂದು ಗುರುತಿಸಲಾಯಿತು. ಪೋಲಿಸರು ಹುಬ್ಬಳ್ಳಿಯಲ್ಲಿ ಒಂದು ನೋಟಿಸ್ಸ ಕೊಟ್ಟರು ಮುಂದೆ ಏನು ಮಾಡಿದರು ನನಗೆ ಗೊತ್ತಿಲ್ಲ. ಈ ಹಂತದಲ್ಲಿ ಆರೋಪಿ ಪರ ವಕೀಲರು ಶವ ಪಂಚನಾಮೆ, ನೋಟಿಸ್ಸ ಹಾಗೂ ಪೋಟೊಗಳನ್ನು ಗುರುತಿಸಲು ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ನೋಟಿಸ್ಸನ್ನು ನಿಪಿ.5 ಎಂದು, ಸಹಿಯನ್ನು ನಿಪಿ.5(ಎ) ಎಂದು, ಶವ ಪಂಚನಾಮೆಯನ್ನು ನಿಪಿ.6 ಎಂದು, ಮತ್ತು ಪೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು.

ಸಿಸಿ ನಂಃ 2028/2025
ಸಿ.ಡಬ್ಲೂ 2/ ಪಿ.ಡಬ್ಲೂ 2

**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞಾ ಸಹಾಯಕರ ಸಹಕಾರಿ ಅಬಿಯೊಜಕರು ಕೋರಿಕೆ ಮೇರೆಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಹಿಸಸ ರವರಿಂದ**

ದಿನಾಂಕಃ 31-05-2025 ರಂದು ಪೋಲಿಸರು ಅಪಘಾತ ಸ್ಥಳಕ್ಕೆ ಕರೆಯಿಸಿದ್ದರು ಎಂದರೆ ಸರಿ. ಅದೇ ವೇಳೆಗೆ ನಿಪಿ.2 ರಂತೆ ನೋಟಿಸ್ಸ ನೀಡಿ ಸ್ಥಳದಲ್ಲಿದ್ದ ಚಾಸಾ-10 ರವರು ತೋರಿಸಿದ ಸ್ಥಳದಲ್ಲಿ ನಿಪಿ.3 ರಂತೆ ಪಂಚನಾಮೆ ಮಾಡಿದರು ಎಂದರೆ ಸರಿ. ಅದೇ ರೀತಿ ನಿಪಿ.6 ಶವಪಂಚನಾಮೆ ತಯಾರಿಸುವ ಕಾಲಕ್ಕೆ ನಾನು ಹಾಜರಿದ್ದೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಮ್ ಜಿ ಆರ್ ವಕೀಲರಿಂದ**

ಚಾಸಾ-1 ನನಗೆ ಪರಿಚಯ ಇಲ್ಲ. ದಿನಾಂಕಃ 31-05-2025 ರಂದು ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಒಳಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.